# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರ.ಸಂ. | : | 830 |
| ಸದಸ್ಯರ ಹೆಸರು | : | ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 11-03-2020 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸ್ಮಶಾನಕ್ಕೆ ಜಮೀನು ಇಲ್ಲದೇ ಇರುವ ಗ್ರಾಮಗಳೆಷ್ಟು; (ಜಿಲ್ಲಾವಾರು ವಿವರಗಳನ್ನು ನೀಡುವುದು) | ರಾಜ್ಯದಲ್ಲಿ ಸ್ಮಶಾನ ಇಲ್ಲದೇ ಇರುವ ಗ್ರಾಮಗಳ ಸಂಖ್ಯೆ:- 6053. ಜಿಲ್ಲಾವಾರು ವಿವರಗಳನ್ನು <u>ಅನುಬಂಧ</u>ದಲ್ಲಿ ಒದಗಿಸಲಾಗಿದೆ. |
| ಆ) | ಈ ಸಮಸ್ಯೆ ಜಟಿಲವಾದ್ದರಿಂದ ಪ್ರತಿ ಗ್ರಾಮದಲ್ಲಿಯೂ ವಿವಿಧ ಸಮುದಾಯಗಳಿಗೆ ಸ್ಮಶಾನಗಳಿಗಾಗಿ ಸರ್ಕಾರ ಸರ್ಕಾರಿ ಜಮೀನನ್ನು ಮೀಸಲಿಟ್ಟಿದೆಯೇ; | ರಾಜ್ಯದಲ್ಲಿ ಯಾವ ಗ್ರಾಮಗಳಲ್ಲಿ ಸರ್ಕಾರಿ ಜಮೀನು ಲಭ್ಯವಿದೆಯೋ ಸದರಿ ಗ್ರಾಮಗಳಿಗೆ ಅವಶ್ಯವಿರುವ ಜಮೀನನ್ನು ಸಾರ್ವಜನಿಕ ಶವಸಂಸ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸುವುದು ಹಾಗೂ ಎಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲವೋ ಅಲ್ಲಿ ಖಾಸಗಿಯವರಿಂದ ಜಮೀನನ್ನು ಖರೀದಿಸಿ, ಸದರಿ ಉದ್ದೇಶಕ್ಕೆ ಕಾಯ್ದಿರಿಸಿ ಈ ಜಾಗವನ್ನು 'ಸಾರ್ವಜನಿಕ ಸ್ಮಶಾನ' ಎಂದು ಕರೆಯಲು ದಿನಾಂಕ:11/09/2014ರ ಸುತ್ತೋಲೆಯಲ್ಲಿ ತಿಳಿಸಲಾಗಿದೆ.<br><br>ಕೆಲವೊಂದು ಅನಿವಾರ್ಯ ಪ್ರಸಂಗಗಳಲ್ಲಿ ಧಾಮಿರ್ಕತೆ (Religion) ಆಧರಿಸಿ ಪ್ರತ್ಯೇಕವಾಗಿ ಸರ್ಕಾರಿ ಜಮೀನನ್ನು ಶವಸಂಸ್ಕಾರಕ್ಕಾಗಿ ಕಾಯ್ದಿರಿಸುವುದು ಅವಶ್ಯವೆನಿಸಿದಲ್ಲಿ ಜಿಲ್ಲಾಧಿಕಾರಿಗಳ ವಿವೇಚನೆಗೆ ಒಳಪಟ್ಟು ಸದರಿ ಉದ್ದೇಶಕ್ಕೆ ಜಮೀನನ್ನು ಕಾಯ್ದಿರಿಸಲು ಕ್ರಮವಹಿಸುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 54 ಎಲ್ ಜಿಪಿ 2017, ದಿನಾಂಕ: 16/10/2017ರಲ್ಲಿ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.<br><br>ಒಟ್ಟಾರೆಯಾಗಿ ರಾಜ್ಯದಲ್ಲಿನ ಗ್ರಾಮಗಳಲ್ಲಿ ಸ್ಮಶಾನಕ್ಕಾಗಿ ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಸ್ಮಶಾನ ಸೌಲಭ್ಯ ಕಲ್ಪಿಸಲು ಖಾಸಗಿಯವರಿಂದ ಜಮೀನು ಖರೀದಿಸಿ 'ಸಾರ್ವಜನಿಕ ಸ್ಮಶಾನ'ವನ್ನಾಗಿ ಕಾಯ್ದಿರಿಸುವ ಸಲುವಾಗಿ ರಾಜ್ಯಾದ್ಯಂತ 2014-15ನೇ ಸಾಲಿನಲ್ಲಿ ರೂ.499.00 ಲಕ್ಷಗಳು, 2015-16ನೇ ಸಾಲಿನಲ್ಲಿ ರೂ.500.00 ಲಕ್ಷಗಳು ಹಾಗೂ 2019-20ನೇ ಸಾಲಿನಲ್ಲಿ ರೂ.100.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. |
| ಇ) | ಇಲ್ಲದಿದ್ದಲ್ಲಿ, ಈ ಸಮಸ್ಯೆಗೆ ಪರ್ಯಾಯ ವ್ಯವಸ್ಥೆಯನ್ನು ರೂಪಿಸಿದೆಯೇ? | |

ಸಂಖ್ಯೆ:ಆರ್‌ಡಿ 29 ಎಲ್‌ಜಿಕ್ಯೂ 2020

(ಆರ್. ಅಶೋಕ)

ಕಂದಾಯ ಸಚಿವರು

# ಅನುಬಂಧ

ನಮೂನೆ-1

ರಾಜ್ಯದಲ್ಲಿ ಸ್ಮಶಾನ ಭೂಮಿ ಸೌಲಭ್ಯ ಇರುವ / ಇಲ್ಲದಿರುವ ಗ್ರಾಮ / ನಗರಗಳ ಮಾಹಿತಿ

| ಕ್ರಸಂ | ಜಿಲ್ಲೆ | ಒಟ್ಟು ಗ್ರಾಮಗಳ ಸಂಖ್ಯೆ | ಒಟ್ಟು ನಗರಗಳ ಸಂಖ್ಯೆ (ಟಿಎಮ್‌ಸಿ/ಸಿಎಮ್‌ಸಿ/ಟಿಪಿ ಸೇರಿ) | ಸ್ಮಶಾನ ಭೂಮಿ ಹೊಂದಿರುವ ಗ್ರಾಮಗಳ ಸಂಖ್ಯೆ | ಸ್ಮಶಾನ ಭೂಮಿ ಹೊಂದಿರುವ ನಗರ ಪ್ರದೇಶಗಳ ಸಂಖ್ಯೆ | ಸ್ಮಶಾನ ಭೂಮಿ ಅಗತ್ಯವಿರುವ ಗ್ರಾಮಗಳ ಸಂಖ್ಯೆ | ಸ್ಮಶಾನ ಭೂಮಿ ಅಗತ್ಯವಿರುವ ನಗರ ಪ್ರದೇಶಗಳ ಸಂಖ್ಯೆ |
|---|---|---|---|---|---|---|---|
| 1 | ಬೆಂಗಳೂರು (ನ) | 875 | 15 | 717 | 15 | 158 | 0 |
| 2 | ಬೆಂಗಳೂರು (ಗ್ರಾ) | 980 | 5 | 909 | 5 | 71 | 0 |
| 3 | ರಾಮನಗರ | 823 | 5 | 631 | 4 | 188 | 1 |
| 4 | ಚಿಕ್ಕಬಳ್ಳಾಪುರ | 1606 | 6 | 1573 | 50 | 33 | 0 |
| 5 | ಕೋಲಾರ | 1616 | 6 | 1520 | 6 | 96 | 0 |
| 6 | ಶಿವಮೊಗ್ಗ | 1619 | 9 | 468 | 112 | 662 | 242 |
| 7 | ದಕ್ಷಿಣ ಕನ್ನಡ | 370 | 52 | 365 | 42 | 5 | 10 |
| 8 | ಉಡುಪಿ | 267 | 5 | 231 | 12 | 20 | 4 |
| 9 | ಕೊಡಗು | 343 | 4 | 245 | 3 | 98 | 1 |
| 10 | ಮೈಸೂರು | 1350 | 9 | 9 | 9 | 71 | 0 |
| 11 | ಮಂಡ್ಯ | 1324 | 7 | 928 | 7 | 470 | 2 |
| 12 | ಉತ್ತರ ಕನ್ನಡ | 1351 | 12 | 418 | 6 | 0 | 0 |
| 13 | ಹಾಸನ | 2415 | 14 | 1697 | 18 | 718 | 0 |
| 14 | ಚಿಕ್ಕಮಗಳೂರು | 1035 | 8 | 780 | 6 | 255 | 2 |
| 15 | ಚಾಮರಾಜನಗರ | 783 | 4 | 444 | 4 | 228 | 0 |
| 16 | ತುಮಕೂರು | 2730 | 10 | 1582 | 10 | 902 | 10 |
| 17 | ದಾವಣಗೆರೆ | 830 | 6 | 716 | 6 | 88 | 0 |
| 18 | ಬೆಳಗಾವಿ | 1175 | 33 | 814 | 33 | 361 | 0 |
| 19 | ವಿಜಯಪುರ | 641 | 13 | 483 | 13 | 158 | 0 |
| 20 | ಹಾವೇರಿ | 682 | 9 | 611 | 9 | 72 | 0 |
| 21 | ಕಲಬುರಗಿ | 908 | 10 | 641 | 10 | 224 | 0 |
| 22 | ರಾಯಚೂರು | 886 | 9 | 630 | 0 | 9 | 0 |
| 23 | ಕೊಪ್ಪಳ | 594 | 5 | 281 | 9 | 313 | 0 |

| | | | | | | | |
|---|---|---|---|---|---|---|---|
| 24 | ಬಳ್ಳಾರಿ | 649 | 15 | 630 | 15 | 17 | 0 |
| 25 | ಬೀದರ್ | 634 | 7 | 603 | 7 | 31 | 0 |
| 26 | ಯಾದಗಿರಿ | 503 | 6 | 341 | 6 | 133 | 0 |
| 27 | ಚಿತ್ರದುರ್ಗ | 1243 | 4 | 625 | 4 | 353 | 0 |
| 28 | ಬಾಗಲಕೋಟೆ | 600 | 13 | 479 | 9 | 111 | 0 |
| 29 | ಗದಗ | 327 | 8 | 225 | 8 | 102 | 0 |
| 30 | ಧಾರವಾಡ | 359 | 6 | 253 | 6 | 106 | 0 |
| ಒಟ್ಟು | | **29518** | **315** | **19849** | **444** | **6053** | **272** |